**G.H.S.BEGUR.BANGALURU -68**

# ಅರ್ಧವಾರ್ಷಿಕ ಪರೀಕ್ಷೆ ೨೦೧೫-೧೬

**೧೦ ನೇ ತರಗತಿ ಪ್ರಥಮಭಾಷೆ ಕನ್ನಡ ಅಂಕಗಳು :೧೦೦**

**ಭಾಗ -'ಎ'(ಗದ್ಯ , ಪದ್ಯ, ಪೋಷಕ ಅಧ್ಯಯನ)**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರ ಬರೆಯಿರಿ . ೧೧*೧=೧೧**

೧.ಅಮೆರಿಕ ವಿದ್ಯಾರ್ಥಿಗಳನ್ನು ರಂಜಿಸಿದ ಕನ್ನಡ ಸಾಹಿತ್ಯಭಾಗಗಳು ಯಾವುವು ?

೨.ಧರ್ಮಗಳು ಹಾಕಿಕೊಟ್ಟಿರುವ ರತ್ನಪಾಠವೇನು ?

೩.ಗೃಹಸ್ಥಾಶ್ರಮವು ಧನ್ಯ ಎಂದು ಹೇಳಿದವರು ಯಾರು ?

೪.ಬುಕ್ಕರಾಯನ ಹಿರಿಮೆ ಏನು ?

೫.ಬುಕ್ಕರಾಯನ ಕಾಲದಲ್ಲಿ ಯಾರೊಳಗೆ ಸಂವಾದ ನಡೆಯಿತು ?

೬.ಘಟಸಂಭೂತ ಯಾರು ?

೭.ಗಾಂಡೀವಿ ಎಂದು ಯಾರನ್ನು ಕರೆಯುತ್ತಾರೆ ?

೮.ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆ ?

೯.ಬಿಳಿಯ ಕೊಳ ಎಲ್ಲಿದೆ ?

೧೦.ಯಾವುದು ಮೂರ್ಖತನದ ಪರಮಾವಧಿ ಎಂದು ಎಚ್ ನರಸಿಂಹಯ್ಯ ಹೇಳಿದ್ದಾರೆ ?

೧೧.ವಿಜ್ಞಾನಿಗಳು ತಮ್ಮ ಅಮೂಲ್ಯವಾದ ಜ್ಞಾನವನ್ನು ಯಾವುದನ್ನು ತಿದ್ದುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ?

**ಈ ಕೆಳಗಿನವುಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೯*೨=೧೮**

೧೨.ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು ?

೧೩.ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದರು ?

೧೪.ಕಲೋಪಾಸಕನ ಕರ್ತವ್ಯವೇನು ?

೧೫.ಸಹಾನುಭೂತಿಗಾಗಿ ಇರಬೇಕಾದ ಎರಡು ಕಣ್ಣುಗಳು ಯಾವುವು ?

೧೬.ದುರ್ಯೋಧನನಿಗೆ ಗಾಂಧಾರಿ ನೀಡಿದ ಉಪದೇಶವೇನು ?

೧೭.ಹಲಗಲಿಗೆ ದಂಡು ಬರಲು ಕಾರಣವೇನು ?

mamatabhagwat1@gmail.com

೧೮.ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ ?

೧೯.ಭರತ ಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಏಕೆ ಸಾಧ್ಯವಾಗಲಿಲ್ಲ?

೨೦.ಲೇಖಕರ ಪ್ರಕಾರ ವಿಶ್ವಧರ್ಮ ಯಾವಾಗ ರೂಪಿತವಾಗಬಲ್ಲುದು ?

ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. ೪*೩=೧೨

೨೧. ''ಸ್ವಲ್ಪ ಹೋಗಿ ಇವರಿಗೆ ಸಹಾಯ ಮಾಡಿ ಬಾ.''

೨೨. ''ಮಿಕ್ಕ ಹೊನ್ನಿಂಗೆ ಜೀರ್ಣಜಿನಾಲಯಗಳಿಗೆ ಸೊದೆಯನಿಕ್ಕುವುದು .''

೨೩.''ಹೊಡದರೊ ಗುಂಡ ಕರುಣ ಇಲ್ಲದ್ದಂಗ .''

೨೪.''ಮನ್ವಂತರಗಳ ಭಾಗ್ಯವ ತೆರೆಸಿ. ''

ಈ ಸಾಹಿತಿಗಳ ಕಾಲ, ಸ್ಥಳ, ಕೃತಿಗಳನ್ನುಕುರಿತು ಬರೆಯಿರಿ . ೨*೩=೬

೨೫.ಗೊರೂರು ರಾಮಸ್ವಾಮಿ ಅಯ್ಯಂಗಾರ್

೨೬. ಜೇಡರ ದಾಸಿಮಯ್ಯ

೨೭. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. ೧*೪=೪

ನೀನುಳ್ಳೊಡೆ-------

-------------------

------------------

---------------ನಂದಿದೊಡೇಂ ||

ಅಥವಾ

ಕುರುಕುಳ -----------------

--------------------------

-------------------------

------------------------- ಗಿಂಬುಕೆಯ್ ||

mamatabhagwat1@gmail.com

**೨೮. ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೪*೧=೪**

ಅಂದಣವನೇರಿದ ಸೊಣಗನಂತೆ

ಕಂಡೊಡೆ ಬಿಡದು ಮುನ್ನಿನ ಸ್ವಭಾವನು ;

ಸುಡು !ಸುಡು !! ಮನವಿದು ವಿಷಯಕ್ಕೆ ಹರಿವುದು ;

ಮೃಢ,ನಿಮ್ಮನುದಿನ ನೆನೆಯಲೀಯದು

ಎನ್ನೊಡೆಯ ಕೂಡಲ ಸಂಗಮದೇವಾ

ನಿಮ್ಮ ಚರಣವ ನೆನೆವಂತೆ ಕರುಣಿಸು

ಸೆರಗೊಡ್ಡಿ ಬೇಡುವೆ ನಿಮ್ಮ ಧರ್ಮ .

ಪ್ರಶ್ನೆಗಳು

೧.ಬಸವಣ್ಣನವರು ಮನವನ್ನು ಯಾವುದಕ್ಕೆ ಹೋಲಿಸಿದ್ದಾರೆ ?

೨. ಬಸವಣ್ಣನವರು ಕೂಡಲಸಂಗಮನಲ್ಲಿ ಏನನ್ನು ಕರುಣಿಸುವಂತೆ ಕೇಳಿದ್ದಾರೆ ?

೩.ಈ ನುಡಿಯ ಯಾವ ಸಾಲುಗಳನ್ನು ಮೆಚ್ಚುವಿರಿ ?

೪.ನೀವು ಆ ಸಾಲುಗಳನ್ನು ಮೆಚ್ಚಲು ಕಾರಣವೇನು ?

**ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯದಲ್ಲಿ ಉತ್ತರ ಬರೆಯಿರಿ. ೨*೪=೮**

೨೯. ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ ವಿವರಿಸಿ.

ಅಥವಾ

ಶಬರಿಯ ಸಡಗರ ,ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ ?

೩೦. ಹಕ್ಕಿಯನ್ನು ಕಾಲಗತಿಗೆಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳು ಯಾವುವು ?

ಅಥವಾ

ಕಾಲಪಕ್ಷಿಯ ಮುಂದೆ ಎಲ್ಲರೂ ಸಮಾನರೆಂಬುದನ್ನು ಕವಿ ಹೇಗೆ ವಿವರಿಸಿದ್ದಾರೆ ?

**೩೧.ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ . ೨೮೨=೪**

ಸಾಧಕನಿಗೆ ,ಅಂತರ್ಜೀವಿಗೆ ಯಾವ ತೊಂದರೆಯೂ ಆಗಬಾರದೆಂದು ಎಲ್ಲ ಧರ್ಮಗಳೂ ಅವನನ್ನು ಸಮಾಜವೇ ನೋಡಿಕೊಳ್ಳಬೇಕೆಂದು ಹೇಳಿವೆ ಧರ್ಮಶಾಲೆಗಳು , ವಿಹಾರಗಳು , ಅನ್ನಛತ್ರಗಳು -ಇವು ಏರ್ಪಟ್ಟಿರುವುದು ಇಂಥವರಿಗಾಗಿ ಹಾಗೂ ನಿರ್ಗತಿಕರಿಗಾಗಿ .ಅನೇಕ ದೇವಸ್ಥಾನಗಳಲ್ಲಿಯೂ ,ಮಠಗಳಲ್ಲಿಯೂ ಇಂಥ ಏರ್ಪಾಟಿದೆ.ಇಂಥ ಸಾಧಕರನ್ನು ಮನೆಯಲ್ಲಿಟ್ಟುಕೊಂಡು ಅವರ ಯೋಗಕ್ಷೇಮವನ್ನು ನೋಡಿಕೊಂಡವರೂ ಉಂಟು .

ಇದು ಸಮಾಜದ ಕರ್ತವ್ಯವಾಯಿತು .ಆದರೆ ಸಾಧಕನ ಕರ್ತವ್ಯವೇನು ?ಇನ್ನೊಬ್ಬರ ಮೇಲೆ ಅವನೆಂದಿಗೂ ಭಾರ ಹಾಕಿರಬಾರದು.ಇನ್ನೊಬ್ಬರು ತಾವಾಗಿಯೇ ಕೈಯೆತ್ತಿಕೊಡದೇ ಅವನು ಏನನ್ನೂ ಸ್ವೀಕರಿಸಬಾರದು .ದಾತೃವಿನ ಮನವನ್ನು ಹತ್ತುಸಲ ಪರೀಕ್ಷಿಸಿ ದಾನವನ್ನು ಸ್ವೀಕರಿಸಬೇಕು .ಕೇಳಿ ದೊರಕಿಸಿಕೊಂಡ ಸಾಮಗ್ರಿ ಸೌಕರ್ಯಗಳ ಮೇಲೆ ನಿಂತ ಸಾಧನೆ -ತಪಸ್ಸು ,ಮರವನ್ನು ಆಶ್ರಯಿಸಿ ಬೆಳೆದಬಳ್ಳಿಯಂತೆ ಅದಕ್ಕೆ ಸ್ವಯಂಪೂರ್ಣತೆ ಇಲ್ಲ .

ಪ್ರಶ್ನೆಗಳು

೧.ಸಾಧಕರನ್ನು ಸಮಾಜವು ಹೇಗೆ ನೋಡಿಕೊಳ್ಳುವುದು ?

೨.ಸಾಧಕನ ಕರ್ತವ್ಯವೇನು ?

## ಭಾಗ ' ಬಿ ' ವ್ಯಾಕರಣ

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ.ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. ೧೦*೧=೧೦**

೩೨. 'ಗ್ರಹ' ಪದದ ತದ್ಭವ ರೂಪವಿದು -----

ಎ) ಗೇಹ ಬಿ)ಗೃಹ ಸಿ)ಗರ ಡಿ) ಗುಹ

೩೩. 'ಮಂಡಳೇಶ್ವರ' ಪದದಲ್ಲಿ ಇರುವ ಸಂಧಿ ------

ಎ) ಗುಣಸಂಧಿ ಬಿ )ಆದೇಶ ಸಂಧಿ ಸಿ)ಸವರ್ಣದೀರ್ಘ ಸಂಧಿ ಡಿ)ಲೋಪಸಂಧಿ

೩೪.ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು ----

ಎ) ಅರ್ಧವಿರಾಮ ಬಿ)ಉದ್ಧರಣ ಸಿ)ಭಾವಸೂಚಕ ಡಿ )ವಾಕ್ಯವೇಷ್ಠನ

೩೫. 'ರಕ್ಷೆಯಿಡಲಿ' ಪದವು ಕ್ರಿಯಾಪದದ ಈ ರೂಪಕ್ಕೆ ಉದಾಹರಣೆಯಾಗಿದೆ .

ಎ)ಸಂಭಾವನಾರ್ಥಕ ಬಿ) ನಿಷೇಧಾರ್ಥಕ ಸಿ)ವಿದ್ಯರ್ಥಕ ಡಿ)ಸಾಮಾನ್ಯಾರ್ಥಕ

೩೬. 'ಹೊಡಿದರೊ' ಪದದ ಗ್ರಾಂಥಿಕ ರೂಪ ----

ಎ) ಹೊಡೆದರು ಬಿ )ಹೊಡೆದ್ರು ಸಿ)ಹೋದರು ಡಿ )ಹೊಡೆದಾಡಿದರು.

೩೭. ಕನ್ನಡ ವರ್ಣಮಾಲೆಯಲ್ಲಿ ಇವುಗಳನ್ನು ಸಂಧ್ಯಕ್ಷರಗಳೆಂದು ಕರೆಯುತ್ತಾರೆ .

ಎ) ಇ, ಈ ಬಿ) ಒ, ಓ ಸಿ )ಉ, ಊ ಡಿ) ಐ ,ಔ

೩೮. ಒಂದು ಅಥವಾ ಅನೇಕವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವನ್ನು ಹೀಗೆ ಕರೆಯುತ್ತಾರೆ ----

ಎ) ಮಿಶ್ರವಾಕ್ಯ ಬಿ)ಸಾಮಾನ್ಯವಾಕ್ಯ ಸಿ)ನಿಷೇಧಾರ್ಥಕ ವಾಕ್ಯ ಡಿ)ಸಂಯೋಜಿತ ವಾಕ್ಯ

೩೯.'ಪಗಲು' ಪದದ ಹೊಸಗನ್ನಡ ರೂಪವಿದು

ಎ)ಹೆಗಲು ಬಿ)ಹಗಲು ಸಿ) ಕಂಗಾಲು ಡಿ) ಇರುಳು

೪೦. 'ಪೆರ್ಮಗ' ಪದದಲ್ಲಿರುವ ಸಮಾಸ -----

ಎ) ದ್ವಿಗು ಬಿ )ಕರ್ಮಧಾರಯ ಸಿ)ಕ್ರಿಯಾ ಡಿ)ಗಮಕ

೪೧.'ಹಣ್ಣುಹಂಪಲು' ಪದದ ವ್ಯಾಕರಣ ವಿಶೇಷ-------

ಎ) ದ್ವಿರುಕ್ತಿ ಬಿ )ಜೋಡುನುಡಿ ಸಿ )ಅನುಕರಣಾವ್ಯಯ ಡಿ )ನುಡಿಗಟ್ಟು

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ. ೪*೧=೪**

೪೨.ಓಡಿಓಡಿ :ದ್ವಿರುಕ್ತಿ::ಗುಜುಗುಜು :------

೪೩. ಚರಣಕ್ಕೆ :ಚತುರ್ಥಿವಿಭಕ್ತಿ :: ಗಾಂಡೀವಿಯೊಳ್ : ---

೪೪.ನಾನು :ಉತ್ತಮಪುರುಷ ಸರ್ವನಾಮ : ತಾನು :---

೪೫.ಬಂದರು : ಭೂತಕಾಲ :ಬರುವರು :---

**೪೬. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ,ಗಣ ವಿಭಾಗ ಮಾಡಿ ,ಛಂದಸ್ಸಿನ ಹೆಸರು ಬರೆಯಿರಿ.೧*೩=೩**

ಎನಗಂ ಪಾಂಡುಗಮಿಲ್ಲ ಭೇದಮಿಳೆಯಂ ಪಚ್ಚಾಳ್ವಮಾ ಪಾಂಡುನಂ

ಅಥವಾ

ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್

**೪೭. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ,ಲಕ್ಷಣದೊಂದಿಗೆ ಸಮನ್ವಯಿಸಿ. ೧*೩=೩**

''ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿಯಂತೆ .''

ಅಥವಾ

'' ಮುಂಗಾರಿ ಸಿಡಿಲ ಸಿಡಿದ್ಹಾಂಗ .''

**ಭಾಗ 'ಸಿ' ವಾಕ್ಯ ರಚನೆ**

**೪೮. ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ . ೧*೩=೩**

೧. ತುಂಬಿದ ಕೊಡ ತುಳುಕುವುದಿಲ್ಲ .

೨.ಆಳಾಗಬಲ್ಲವನು ಅರಸಾಗಬಲ್ಲ.

೩.ದೇಶ ಸುತ್ತಿ ನೋಡು ;ಕೋಶ ಓದಿ ನೋಡು.

**೪೯. ನಿಮ್ಮ ಶಾಲೆಯಲ್ಲಿ ಆಚರಿಸಿದ 'ಪರಿಸರ ದಿನ'ದ ಕುರಿತು ಧಾರವಾಡದ ಸಾಧನಕೇರಿಯಲ್ಲಿ ಇರುವ ನಿಮ್ಮ ಗೆಳೆಯ/ಗೆಳತಿ ( ತೇಜಸ್/ ಶ್ರಾವ್ಯ )ಗೆ ಪತ್ರ ಬರೆಯಿರಿ.**

**ಅಥವಾ** **೧*೫=೫**

**ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಸಾಹಿತಿಗಳ ವಿವರವಿರುವ ಪುಸ್ತಕ ಕಳಿಸಿಕೊಡುವಂತೆ ಕೋರಿ ನವಕರ್ನಾಟಕ ಪ್ರಕಾಶನ ಬೆಂಗಳೂರು ಇವರಿಗೆ ಮನವಿ ಪತ್ರ ಬರೆಯಿರಿ .**

**೫೦. ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. ೧*೫=೫**

* ಘನತ್ಯಾಜ್ಯ ನಿರ್ವಹಣೆ

* ಸಾಂಪ್ರದಾಯಿಕ ಆಹಾರ ಪದ್ಧತಿಯ ಪ್ರಯೋಜನಗಳು

* ಜ್ಞಾನಾಭಿವೃದ್ಧಿಯಲ್ಲಿ ಗ್ರಂಥಾಲಯದ ಪಾತ್ರ